

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 07-12-2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಸಹಾಬರಲ್ಲಿ ಮೊದಲನೆಯದಾಗಿ ಹಝ್ರತ್ ಉಬೈದ್ ಬಿನ್ ಝೈದ್ ಅನ್‌ಸಾರಿ(ರ) ಬಗ್ಗೆ ವಿವರಿಸುವೆನು. ಅವರು ಬನೂ ಅಜ್‌ಲಾನ್ ಗೋತ್ರಕ್ಕೆ ಸೇರಿದ್ದರು. ಬದರ್, ಉಹುದ್ ಯುದ್ಧಗಳಲ್ಲಿ ಅವರು ಭಾಗವಹಿಸಿದ್ದರು. ಹಝ್ರತ್ ಮುಆಝ್ ಬಿನ್ ರಿಫಾಅ್ ತನ್ನ ಪಿತರಿಂದ ವರದಿ ಮಾಡುತ್ತಾರೆ. ಅವರು ಹೇಳಿದರು: ನಾನು ನನ್ನ ಸಹೋದರ ಹಝ್ರತ್ ಖಲ್ಲಾದ್ ಬಿನ್ ರಾಫಿಅ್ ಜೊತೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಒಂದು ಕ್ಷೀಣ ದೇಹದ ಒಂಟೆಯನ್ನೇರಿ ಬದರ್ ಕಡೆಗೆ ಹೊರಟೆವು. ನಮ್ಮ ಜೊತೆ ಉಬೈದ್ ಬಿನ್ ಝೈದ್ ಸಹ ಇದ್ದರು. ರೌಹ ಎಂಬ ಸ್ಥಳಕ್ಕೆ ಮೊದಲು ಸಿಗುವ ಬುರೀದ್ ಎಂಬಲ್ಲಿಗೆ ತಲಪಿದಾಗ ನಮ್ಮ ಒಂಟೆ ಕುಳಿತು ಬಿಟ್ಟಿತು. ನಾನು ಪ್ರಾರ್ಥಿಸಿದೆ, ಓ ಅಲ್ಲಾಹ್, ನಾವು ನಿನಗೋಸ್ಕರ ಹರಕೆ ಮಾಡುತ್ತೇವೆ. ನಾವು ಮರಳಿ ಮದೀನಕ್ಕೆ ತಲಪಿದರೆ ನಾವು ಈ ಒಂಟೆಯನ್ನು ಬಲಿದಾನವಾಗಿ ನೀಡುವೆವು. ನಾವು ಅಲ್ಲಿಯೇ ಇದ್ದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಗೆ ತಲಪಿದರು. ಅವರು ನಮ್ಮೊಂದಿಗೆ ವಿವರವೇನೆಂದು ವಿಚಾರಿಸಿದರು. ನಾವು ಅವರಿಗೆ ಎಲ್ಲಾ ವಿಷಯ ತಿಳಿಸಿದೆವು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಬಳಿ ನಿಂತರು. ಅವರು ವುಝು ಮಾಡಿದರು ಮತ್ತು ಬಾಕಿಯಾದ ನೀರಿನಲ್ಲಿ ತನ್ನ ಬಾಯಿಯ ಜೊಲ್ಲು ಹಾಕಿದರು. ಅನಂತರ ಅವರ ಆಜ್ಞೆ ಪ್ರಕಾರ ಒಂಟೆಯ ಬಾಯಿ ತೆರೆದೆವು. ಅವರು ಒಂಟೆಯ ಬಾಯಿಗೆ ಸ್ವಲ್ಪ ನೀರು ಸುರಿದರು. ಅನಂತರ ಅದರ ತಲೆಯ ಮೇಲೆ, ಅದರ ಕೊರಳಿನ ಮೇಲೆ, ಅದರ ಭುಜದ ಮೇಲೆ ಅದರ ಡುಬ್ಬದ ಮೇಲೆ, ಅದರ ಬೆನ್ನ ಮೇಲೆ ಮತ್ತು ಬಾಲದ ಮೇಲೆ ಸ್ವಲ್ಪ ನೀರು ಸುರಿದರು. ಅನಂತರ ಅವರು ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ರಾಫಿಅ್ ಮತ್ತು ಖಲ್ಲಾದ್‌ರನ್ನು ಈ ಒಂಟೆಯ ಮೇಲೆ ಸವಾರಿ ಮಾಡಿಸಿ ಕರೆದುಕೊಂಡು ಹೋಗು. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಂದ ಹೊರಟರು. ನಾವು ಸಹ ಒಂಟೆಯ ಮೇಲೆ ಸವಾರಿ ಮಾಡಿ ಮುನ್‌ಸಿಫ್ ಎಂಬಲ್ಲಿ ಅವರ ಸಮೀಪಕ್ಕೆ ತಲಪಿದೆವು. ನಮ್ಮ ಒಂಟೆ ಇತರ ಎಲ್ಲಾ ಒಂಟೆಗಳಿಗಿಂತ ಮುಂದೆ ಇತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನು ನೋಡಿ ಮುಗುಳ್ನಕ್ಕರು. ಪ್ರಕಟಿಸಿದರು. ನಾವು ಮುಂದೆ ಸಾಗಿ ಬದರ್‌ಗೆ ತಲಪಿದೆವು. ಅನಂತರ ನಾವು ಬದರ್‌ನಿಂದ ಮರಳಿ ಬರುವಾಗ ಮುಸಲ್ಲಾ ಎಂಬ ಸ್ಥಳದಲ್ಲಿ ಒಂಟೆ ಪುನಃ ಕುಳಿತು ಬಿಟ್ಟಿತು. ಆಗ ನನ್ನ ಸಹೋದರ ಅದನ್ನು ವಧಿಸಿ ಅದರ ಮಾಂಸವನ್ನು ಸದಖವಾಗಿ ವಿತರಣೆ ಮಾಡಿದರು. ಈ ಘಟನೆಯಲ್ಲಿ ಹಝ್ರತ್ ಉಬೈದ್ ಬಿನ್ ಅನ್‌ಸಾರಿ(ರ) ಸಹ ಸೇರಿದ್ದರು.

ಹಝ್ರತ್ ಝಾಹಿರ್ ಬಿನ್ ಹರಾಮುಲ್ ಅಶ್‌ಜಯೀ(ರ) ಓರ್ವ ಬದರೀ ಸಹಾಬಿಯಾಗಿದ್ದರು. ಅವರು ಅಶ್‌ಜಅ್ ಗೋತ್ರಕ್ಕೆ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಗ್ರಾಮವಾಸಿಯಾದ ಝಾಹಿರ್ ಎಂಬವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಳ್ಳಿಯ ಸಾಮಗ್ರಿಗಳ ಪಾರಿತೋಷಿಕ ತರುತ್ತಿದ್ದರು. ಅವರು ಮರಳಿ ಹೋಗುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಸಾಕಷ್ಟು ಹಣ ಮತ್ತು ಸಾಮಗ್ರಿಗಳನ್ನು ಕೊಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಿದ್ದರು ಝಾಹಿರ್ ನಮ್ಮ ಗ್ರಾಮೀಣ ಮಿತ್ರರಾಗಿದ್ದಾರೆ, ನಾವು ಅವರ ನಗರವಾಸಿ ಮಿತ್ರರಾಗಿದ್ದೇವೆ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಪ್ರೀತಿಸುತ್ತಿದ್ದರು. ಹಝ್ರತ್ ಝಾಹಿರ್ ಓರ್ವ ಸಾಮಾನ್ಯ ಮೈಕಟ್ಟಿನ ವ್ಯಕ್ತಿಯಾಗಿದ್ದರು. ಒಂದು ದಿನ ಅವರು ಪೇಟೆಯಲ್ಲಿ ಏನೋ ಮಾರಾಟ ಮಾಡುತ್ತಿದ್ದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಹಿಂದಿನಿಂದ ಬಂದು ಅವರನ್ನು ತಬ್ಬಿಕೊಂಡರು. ಇನ್ನೊಂದು ವರದಿ ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಹಿಂದೆ ನಿಂತು ಅವರ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿದರು. ಹಝ್ರತ್ ಝಾಹಿರ್, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡಲು ಸಾಧ್ಯವಾಗದ ಕಾರಣ ಯಾರು? ಎಂದು ಕೇಳಿದರು. ನನ್ನನ್ನು ಬಿಟ್ಟುಬಿಡಿರಿ ಎಂದು ಹೇಳಿದರು. ಆದರೆ ಅವರಿಗೆ ತನ್ನ ಹಿಂದೆ ಬಂದು ನಿಂತವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಎಂದು ಭಾಸವಾದಾಗ ಅವರು ತನ್ನ ಶರೀರವನ್ನು ಅವರ ಎದೆಗೆ ಒರೆಸಲು ತೊಡಗಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮಾಷೆಗೋಸ್ಕರ, ಈ ಗುಲಾಮನನ್ನು ಖರೀದಿಸುವವರು ಯಾರಿದ್ದಾರೆ? ಎಂದು ಹೇಳಿದರು. ಹಝ್ರತ್ ಝಾಹಿರ್ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನಿಮ್ಮ ಈ ವ್ಯಾಪಾರ ನಷ್ಟವಾಗುವುದು. ಯಾಕೆಂದರೆ ನನ್ನನ್ನು ಖರೀದಿಸುವವರು ಯಾರೂ ಇರಲಾರರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನ ಸನ್ನಿಧಿಯಲ್ಲಿ ನೀವು ನಷ್ಟದ ವ್ಯಾಪಾರವಾಗಲಾರಿರಿ. ಅಥವಾ ಹೇಳಿದರು: ನೀವು

ಅಲ್ಲಾಹನ ದೃಷ್ಟಿಯಲ್ಲಿ ಬಹಳ ಬೆಲೆಬಾಳುವವರಾಗಿದ್ದೀರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಪ್ರತಿಯೊಬ್ಬ ನಗರವಾಸಿಗೆ ಯಾವುದಾದರೊಬ್ಬ ಗ್ರಾಮವಾಸಿಯೊಂದಿಗೆ ಸಂಬಂಧವಿರುತ್ತದೆ. ಮುಹಮ್ಮದ್ ಕುಟುಂಬದ ಗ್ರಾಮವಾಸಿ ಸಂಬಂಧಿಕ ಝಾಹಿರ್ ಬಿನ್ ಹರಾಮ್ ಆಗಿದ್ದಾರೆ. ಝಾಹಿರ್ ಬಿನ್ ಹರಾಮ್ ಅನಂತರ ಕೂಫದಲ್ಲಿ ವಾಸಿಸಲು ತೊಡಗಿದರು.

ಇನ್ನು ವಿವರಿಸಲಿರುವ ಸಹಾಬಿ ಹಝ್ರತ್ ಝೈದ್ ಬಿನ್ ಖತ್ತಾಬ್(ರ). ಅವರು ಹಝ್ರತ್ ಉಮರ್(ರ)ರ ಹಿರಿಯ ಸಹೋದರ. ಹಝ್ರತ್ ಉಮರ್ ಮುಸ್ಲಿಮರಾಗುವ ಮೊದಲೇ ಅವರು ಮುಸ್ಲಿಮರಾಗಿದ್ದರು. ಅವರು ಮೊದಲು ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಬದರ್, ಉಹುದ್, ಖಂದಕ್, ಸಮೇತ ಎಲ್ಲಾ ಯುದ್ಧಗಳಲ್ಲಿಯೂ ಹುದೈಬಿಯಾದ ಬೈಅತ್ ರಿಝ್ವಾನ್‌ನಲ್ಲಿಯೂ ಭಾಗವಹಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಇನ್ ಬಿನ್ ಅದಿ ಜೊತೆ ಅವರನ್ನು ಸಹೋದರ ಸಂಬಂಧಿಯಾಗಿ ಮಾಡಿದ್ದರು. ಅವರಿಬ್ಬರೂ ಯಮಾಮ ಯುದ್ಧದಲ್ಲಿ ಶಹೀದರಾದರು. ಉಹುದ್ ಯುದ್ಧದ ದಿನ ಹಝ್ರತ್ ಉಮರ್(ರ) ಆಣೆ ಹಾಕಿ ಹೇಳಿದರು ನನ್ನ ಕವಚವನ್ನು ಧರಿಸಿರಿ ಎಂದು. ಹಝ್ರತ್ ಝೈದ್(ರ) ಸ್ವಲ್ಪ ಹೊತ್ತು ಕವಚ ಧರಿಸಿ ಅನಂತರ ಅದನ್ನು ಕಳಚಿದರು. ಹಝ್ರತ್ ಉಮರ್(ರ) ಹಾಗೆ ಮಾಡಲು ಕಾರಣವೇನೆಂದು ಕೇಳಿದಾಗ ಹಝ್ರತ್ ಝೈದ್(ರ) ಹೇಳಿದರು: ನಾನು ಸಹ ನೀವು ಆಶಿಸುವ ಶಹಾದತ್ ಆಶಿಸುವವನಾಗಿದ್ದೇನೆ. ಅನಂತರ ಅವರಿಬ್ಬರೂ ಕವಚ ಧರಿಸಲಿಲ್ಲ. ಹಝ್ರತ್ ಝೈದ್ ಬಿನ್ ಖತ್ತಾಬ್ ವರದಿ ಮಾಡುತ್ತಾರೆ: ಹಜ್ಜತುಲ್ ವಿದಾ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ನಿಮ್ಮ ಗುಲಾಮರ ಬಗ್ಗೆ ಶ್ರದ್ಧೆ ವಹಿಸಿರಿ. ನೀವು ಉಣ್ಣುವುದನ್ನೇ ಅವರಿಗೂ ಉಣಿಸಿರಿ. ನೀವು ಧರಿಸುವ ಬಟ್ಟೆಗಳ ಹಾಗಿರುವ ಬಟ್ಟೆಗಳನ್ನು ಅವರು ಸಹ ಧರಿಸುವಂತೆ ಮಾಡಿರಿ. ನೀವು ಕ್ಷಮಿಸಲಾಗದಂತಹ ಏನಾದರೂ ತಪ್ಪನ್ನು ನಿಮ್ಮ ಗುಲಾಮರು ಮಾಡಿದರೆ ನೀವು ಅವರನ್ನು ಶಿಕ್ಷಿಸಬೇಡಿರಿ, ಅವರನ್ನು ಮಾರಾಟ ಮಾಡಿಬಿಡಿರಿ.

ಯಮಾಮ ಯುದ್ಧದಲ್ಲಿ ಮುಸ್ಲಿಮರು ಹಿಂದೆ ಸರಿದಾಗ ಹಝ್ರತ್ ಝೈದ್ ಬಿನ್ ಖತ್ತಾಬ್ ಉಚ್ಚಸ್ವರದಲ್ಲಿ ಪ್ರಾರ್ಥಿಸಿದರು: ಓ ಅಲ್ಲಾಹ್, ನನ್ನ ಸಂಗಡಿಗರು ಓಡಿ ಹೋದುದರ ಬಗ್ಗೆ ನಾನು ನಿನ್ನೊಡನೆ ಕ್ಷಮೆಯನ್ನು ಯಾಚಿಸುತ್ತೇನೆ. ಮುಸೈಲಿಮ ಕಝ್ಝಾಬ್ ಮತ್ತು ಮಹ್‌ಕಮ್ ಬಿನ್ ತುಫೈಲ್ ಮಾಡಿದ ಕೃತ್ಯಗಳ ಬಗ್ಗೆ ನಾನು ನಿನ್ನ ಸನ್ನಿಧಿಯಲ್ಲಿ ನನ್ನ ದೋಷ ಮುಕ್ತಿಯನ್ನು ಯಾಚಿಸುತ್ತೇನೆ. ಅನಂತರ ಅವರು ಪತಾಕೆಯನ್ನು ಬಲವಾಗಿ ಹಿಡಿದುಕೊಂಡು ಶತ್ರು ಸೈನಿಕರ ಸಾಲುಗಳಿಗೆ ನುಗ್ಗಿ ಖಡ್ಗ ಪ್ರಹಾರದ ಪರಾಕ್ರಮ ಪ್ರಕಟಿಸಿದರು. ಹಾಗೆ ಅವರು ಶಹೀದರಾದರು. ಹಝ್ರತ್ ಝೈದ್ ಶಹೀದರಾದಾಗ ಹಝ್ರತ್ ಉಮರ್(ರ) ಹೇಳಿದು: ಅಲ್ಲಾಹನು ಝೈದ್ ಮೇಲೆ ಅನುಗ್ರಹದೋರಲಿ. ಅವರು ಎರಡು ಒಳಿತುಗಳಲ್ಲಿ ನನಗಿಂತ ಆದ್ಯತೆ ಹೊಂದಿದ್ದಾರೆ. ಒಂದು, ಇಸ್ಲಾಮ್ ಧರ್ಮವನ್ನು ಸ್ವೀಕರಿಸುವುದರಲ್ಲಿ ಮತ್ತು ಎರಡನೆಯದಾಗಿ, ನನಗಿಂತ ಮೊದಲು ಶಹೀದನಾಗುವುದರಲ್ಲಿ. ಒಂದು ವರದಿ ಹೀಗಿದೆ: ಮುತಮ್ಮಿಮ್ ಬಿನ್ ನವೀರ ತನ್ನ ಸಹೋದರ ಮಾಲಿಕ್ ಬಿನ್ ನವೀರ ಮೃತನಾದಾಗ ಅವರ ಸ್ಮರಣೆಯಲ್ಲಿ ಶೋಕಗೀತೆ ಹಾಡಿದಾಗ ಹಝ್ರತ್ ಉಮರ್(ರ) ಹೇಳಿದರು: ನಾನು ಸಹ ನಿಮ್ಮ ಹಾಗೆ ಒಳ್ಳೆಯ ಪದ್ಯ ರಚಿಸಬಲ್ಲವನಾಗಿದ್ದರೆ ನಾನು ನನ್ನ ಸಹೋದರ ಝೈದ್ ಬಗ್ಗೆ ಪದ್ಯವನ್ನು ನೀವು ನಿಮ್ಮ ಸಹೋದರನ ಬಗ್ಗೆ ಹಾಡಿದ ಹಾಗೆ ಹಾಡುತ್ತಿದ್ದೆನು. ಆಗ ಮುತಮ್ಮಿಮ್ ಬಿನ್ ನವೀರ ಹೇಳಿದರು: ನಿಮ್ಮ ಸಹೋದರ ಈ ಲೋಕದಿಂದ ಅಗಲಿ ಹೋದ ಹಾಗೆ ನನ್ನ ಸಹೋದರನೂ ಅಗಲಿ ಹೋಗುತ್ತಿದ್ದರೆ ನಾನು ಎಂದೂ ಶೋಕಿಸುತ್ತಿರಲಿಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: ನೀವು ಸಂತಾಪ ಸೂಚಿಸಿದ ರೀತಿಯಲ್ಲಿ ಬೇರೆ ಯಾರೂ ನನ್ನೊಂದಿಗೆ ಸಂತಾಪ ಸೂಚಿಸಲಿಲ್ಲ.

ಈ ಘಟನೆಗೆ ಸಂಬಂಧಿಸಿ ಇನ್ನೊಂದು ವಿಸ್ತೃತ ವರದಿ ಹೀಗಿದೆ: ಹಝ್ರತ್ ಉಮರ್(ರ) ಹಝ್ರತ್ ಮುತಮ್ಮಿಮ್ ಬಿನ್ ನವೀರರೊಂದಿಗೆ ಕೇಳಿದರು: ನಿಮಗೆ ನಿಮ್ಮ ಸಹೋದರನು ಮೃತನಾದ ಬಗ್ಗೆ ಎಷ್ಟು ದುಃಖವಿದೆ. ಆಗ ಅವರು ತನ್ನ ಒಂದು ಕಣ್ಣಿನ ಕಡೆಗೆ ಸಂಜ್ಞೆ ಮಾಡಿ ಹೇಳಿದರು: ನನ್ನ ಈ ಕಣ್ಣು ಈ ದುಃಖದ ಕಾರಣ ಕೆಟ್ಟು ಹೋಯಿತು. ನಾನು ನನ್ನ ಇನ್ನೊಂದು ಕಣ್ಣಲ್ಲಿ ಎಷ್ಟು ಕಣ್ಣೀರು ಸುರಿಸಿದೆನೆಂದರೆ ನನ್ನ ಕೆಟ್ಟುಹೋದ ಕಣ್ಣು ಸಹ ಅಶ್ರುಧಾರೆ ಸುರಿಸುವುದರಲ್ಲಿ ಸಹಾಯ ಮಾಡಿತು. ಹಝ್ರತ್ ಉಮರ್ ಹೇಳಿದರು: ಇದು ಎಂತಹ ಶೋಕ ಪ್ರಕಟಣೆ ಎಂದರೆ ಯಾರೂ ಸಹ ತನ್ನ ಮೃತನಾದ ಸಹೋದರನಿಗೋಸ್ಕರ ಇಷ್ಟು ತೀವ್ರ ದುಃಖವನ್ನು ಪ್ರಕಟಿಸಿರಲಾರ. ಅಲ್ಲಾಹನು ಝೈದ್ ಬಿನ್ ಖತ್ತಾಬ್ ಮೇಲೆ ದಯೆದೋರಲಿ. ನನಗೆ ಪದ್ಯ ರಚಿಸುವ ಶಕ್ತಿ ಇರುತ್ತಿದ್ದರೆ ನಾನು ಸಹ ಝೈದ್ ಬಗ್ಗೆ ನೀವು ನಿಮ್ಮ ಸಹೋದರನನ್ನು ನೆನಪಿಸಿ ರೋದಿಸುವ ಹಾಗೆ ರೋದಿಸುತ್ತಿದ್ದೆನು. ಆಗ ಹಝ್ರತ್ ಮುತಮ್ಮಿಮ್ ಹೇಳಿದರು: ಓ ಅಮೀರುಲ್ ಮೂಮಿನೀನ್, ನನ್ನ ಸಹೋದರ ಯಮಾಮ ಯುದ್ಧದಲ್ಲಿ ನಿಮ್ಮ ಸಹೋದರನಂತೆ ಶಹೀದನಾಗುತ್ತಿದ್ದರೆ ನಾನು ಎಂದೂ ರೋದಿಸುತ್ತಿರಲಿಲ್ಲ. ಅವರ ಈ ಮಾತು ಹಝ್ರತ್ ಉಮರ್‌ರ ಮನಸ್ಸಿಗೆ ಹಿಡಿಸಿತು. ಅವರಿಗೆ ತನ್ನ ಸಹೋದರನ ಬಗ್ಗೆ ಸಮಾಧಾನವಾಯಿತು. ಅವರಿಗೆ ತನ್ನ ಸಹೋದರನ ಅಗಲಿಕೆ ಬಗ್ಗೆ ಬಹಳ ದುಃಖವಿತ್ತು. ಅವರು ಹೇಳುತ್ತಿದ್ದರು: ತಂಗಾಳಿ ಬೀಸುವಾಗ ನನ್ನ ಸಮೀಪಕ್ಕೆ ಝೈದರ ಸುವಾಸನೆ ಬೀರುತ್ತಿದೆ.

ಹಝ್ರತ್ ಝೈದರನ್ನು ಅಬೂ ಮರ್‌ಯಮುಲ್ ಹನಫೀ ಹತ್ಯೆಮಾಡಿದ್ದನು. ಈ ಅಬೂ ಮರ್‌ಯಮ್ ಮುಸ್ಲಿಮನಾದಾಗ ಹಝ್ರತ್ ಉಮರ್(ರ) ಅವನೊಂದಿಗೆ ಕೇಳಿದರು: ನೀನು ಝೈದರನ್ನು ಶಹೀದ್ ಮಾಡಿದೆಯೋ? ಅವರು ಹೇಳಿದರು: ಓ ಅಮೀರುಲ್ ಮೂಮಿನೀನ್, ಅಲ್ಲಾಹನು ಹಝ್ರತ್ ಝೈದರಿಗೆ ನನ್ನ ಕೈಗಳ ಮೂಲಕ ಗೌರವ ನೀಡಿದನು. ನನ್ನನ್ನು ಅವರ ಕೈಗಳಿಂದ ಹೀನೈಸಲಿಲ್ಲ. ಹಝ್ರತ್ ಉಮರ್(ರ) ಅವರೊಂದಿಗೆ ಕೇಳಿದರು:

ಯಮಾಮ ಯುದ್ಧದಲ್ಲಿ ಆ ದಿನ ಮುಸ್ಲಿಮರು ನಿಮ್ಮ ಎಷ್ಟು ಜನರನ್ನು ಹತ್ಯೆಮಾಡಿದರೆಂದು ಹೇಳಬಲ್ಲೆಯಾ? ಅಬೂ ಮರ್‌ಯಮ್ ಹೇಳಿದರು: ಸಾವಿರದ ನಾನ್ನೂರು ಅಥವಾ ಸ್ವಲ್ಪ ಹೆಚ್ಚಿಗೆ. ಹಝ್ರತ್ ಉಮರ್ ಹೇಳಿದರು, **ಬಿಅ್‌ಸಲ್ ಖತ್ಲ್** ಎಷ್ಟು ಕೆಟ್ಟ ಹತ್ಯೆಗೊಳಿಸಲ್ಪಟ್ಟವರು. ಅಬೂ ಮರ್‌ಯಮ್ ಹೇಳಿದರು: ಎಲ್ಲಾ ಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು. ಅವನು ನನ್ನನ್ನು ಹತ್ಯೆಯಿಂದ ರಕ್ಷಿಸಿ ಇಸ್ಲಾಮಿನ ಕಡೆಗೆ ಮರಳಿಸಿದನು. ಅಲ್ಲಾಹನು ತನ್ನ ಸಂದೇಶ ವಾಹಕರಿಗೆ ಮತ್ತು ಮುಸ್ಲಿಮರಿಗೆ ಇದನ್ನೇ ಬಯಸಿದನು. ಹಝ್ರತ್ ಉಮರ್(ರ) ಅಬೂ ಮರ್‌ಯಮ್ ಹೇಳಿದ ಮಾತುಗಳಿಂದ ಬಹಳ ಸಂತೋಷಭರಿತರಾದರು. ಅಬೂ ಮರ್‌ಯಮ್ ಅನಂತರ ಬಸ್ರಾ ನಗರದ ಖಾಝಿಯಾಗಿ ನೇಮಿಸಲ್ಪಟ್ಟರು.

ಇನ್ನೊಬ್ಬ ಸಹಾಬಿ ಹಝ್ರತ್ ಉಬಾದ ಬಿನ್ ಖಶ್‌ಖಾಶ್. ಅವರು ಹಝ್ರತ್ ಮುಜ್‌ಝಿರ್ ಬಿನ್ ಝಿಯಾದರ ಚಿಕ್ಕಪ್ಪನ ಮಗನಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಬದರ್ ಯುದ್ಧದಲ್ಲಿ ಖೈಸ್ ಬಿನ್ ಸಾಯಿಬ್‌ನನ್ನು ಸೆರೆ ಹಿಡಿದಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಅವರನ್ನು ಹಝ್ರತ್ ನುಅ್‌ಮಾನ್ ಬಿನ್ ಮಾಲಿಕ್, ಹಝ್ರತ್ ಮುಜ್‌ಝಿರ್ ಬಿನ್ ಝಿಯಾದರ ಮಯ್ಯಿತ್‌ಗಳೊಂದಿಗೆ ಒಂದು ಗೋರಿಯಲ್ಲಿ ದಫನ್ ಮಾಡಲಾಯಿತು. ಇನ್ನೊಬ್ಬ ಸಹಾಬಿ ಅಬ್ದುಲ್ಲಾ ಬಿನ್ ಜದ್ದ್(ರ). ಅವರ ಪಿತ ಜದ್ದ್ ಬಿನ್ ಖೈಸ್. ಅವರ ಉಪನಾಮ ಅಬೂ ವಹಬ್ ಎಂದು. ಬನೂ ಸಲಿಮ ಎಂಬ ಅನ್‌ಸಾರ್ ಗೋತ್ರಕ್ಕೆ ಅವರು ಸೇರಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಮುಆಝ್ ಬಿನ್ ಜಬಲ್ ಅವರಿಗೆ ತಾಯಿಯ ಕಡೆಯಿಂದ ಸಹೋದರರಾಗಿದ್ದರು.

ಮತ್ತೊಬ್ಬ ಸಹಾಬಿ ಹಝ್ರತ್ ಹಾರಿಸ್ ಬಿನ್ ಔಸ್ ಬಿನ್ ಮುಆಝ್(ರ). ಅವರು ಔಸ್ ಗೋತ್ರದ ಮುಖಂಡ ಹಝ್ರತ್ ಸಅದ್ ಬಿನ್ ಮುಆಝರ ಸಹೋದರ ಪುತ್ರನಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ತಮ್ಮ 28ನೇ ವರ್ಷ ಪ್ರಾಯದಲ್ಲಿ ಶಹೀದರಾದರೆಂದು ಹೇಳಲಾಗುತ್ತಿದೆ. ಬೇರೆ ಕೆಲವು ವರದಿಗಳ ಪ್ರಕಾರ ಅವರು ಉಹುದ್ ಯುದ್ಧದಲ್ಲಿ ಶಹೀದರಾಗಲಿಲ್ಲ. ಕಅಬ್ ಬಿನ್ ಅಶ್ರಫ್‌ನನ್ನು ಹತ್ಯೆ ಮಾಡಿದವರಲ್ಲಿ ಅವರು ಸೇರಿದ್ದರು ಎಂದು ಹೇಳಲಾಗುತ್ತಿದೆ. ಆ ಆಕ್ರಮಣದ ಕಾಲದಲ್ಲಿ ಅವರ ಪಾದ ಗಾಯಗೊಂಡಿತು ಮತ್ತು ರಕ್ತ ಹರಿಯಿತು. ಅವರು ತಮ್ಮ ಸಂಗಡಿಗರ ಖಡ್ಗದ ತುದಿಯಿಂದ ಗಾಯಗೊಂಡಿದ್ದರು. ಅವರನ್ನು ವೇಗವಾಗಿ ಮದೀನಕ್ಕೆ ಒಯ್ಯಲಾಯಿತು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ತಂದಾಗ ಅವರು ತನ್ನ ಜೊಲ್ಲನ್ನು ಗಾಯಕ್ಕೆ ತಗಲಿಸಿದಾಗ ಅವರಿಗೆ ಅನಂತರ ಕಷ್ಟವುಂಟಾಗಲಿಲ್ಲ.

ಈ ಘಟನೆಗೆ ಸಂಬಂಧಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆದುದನ್ನು ವಿವರಿಸುತ್ತೇನೆ. ಕಅಬ್ ಬಿನ್ ಅಶ್ರಫ್‌ನನ್ನು ಅರಬ್ ದೇಶದ ಯಹೂದಿಯರು ತಮ್ಮ ಮುಖಂಡನನ್ನಾಗಿ ಅಂಗೀಕರಿಸಿದ್ದರು. ಆದರೆ ಅವನು ಅತ್ಯಂತ ಕೊಳಕು ಸ್ವಭಾವದವನಾಗಿದ್ದನು. ಗೂಢ ತಂತ್ರಗಳನ್ನು ರೂಪಿಸುವುದರಲ್ಲಿ ಮತ್ತು ವಿಧ್ವಂಸಕ ಕೃತ್ಯಗಳನ್ನು ನಡೆಸುವುದರಲ್ಲಿ ನಿಪುಣನಾಗಿದ್ದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಹಿಜ್‌ರತ್ ಮಾಡಿದಾಗ ಕಅಬ್ ಬಿನ್ ಅಶ್ರಫ್ ಸಹ ಇತರ ಯಹೂದಿಗಳೊಂದಿಗೆ ಸೇರಿ ಸೌಹಾರ್ದ ಸಂಧಿಯಲ್ಲಿ ಭಾಗಿಯಾಗಿದ್ದನು. ಆದರೆ ಅವನ ಹೃದಯದಲ್ಲಿ ಮುಸ್ಲಿಮರ ವಿರುದ್ಧ ಹಗೆತನ ಮತ್ತು ವಿದ್ವೇಷದ ಅಗ್ನಿ ಜ್ವಲಿಸುತ್ತಿತ್ತು. ಬದರ್ ಯುದ್ಧದ ನಂತರ ಅವನ ವರ್ತನೆ ವಿದ್ರೋಹಕರವೂ ಪಿತೂರಿಯದೂ ಆಗಿತ್ತು. ಬದರ್ ಯುದ್ಧದ ನಂತರ ಅವನು ಮಕ್ಕಕ್ಕೆ ಹೋಗಿ ಅಲ್ಲಿ ತನ್ನ ವಾಕ್ಚಾತುರ್ಯ ಮತ್ತು ಪದ್ಯಗಳ ಸಹಾಯದಿಂದ ಖುರೈಶಿಗಳ ಹೃದಯದಲ್ಲಿ ಮುಸ್ಲಿಮರ ವಿರುದ್ಧ ಪ್ರತೀಕಾರ ಮಾಡುವ ಅಗ್ನಿಯನ್ನು ಜ್ವಲಿಸುವಂತೆ ಮಾಡಿದನು. ಇದೇ ರೀತಿ ಅವನು ಬೇರೆ ಗೋತ್ರಗಳನ್ನೂ ಮುಸ್ಲಿಮರ ವಿರುದ್ಧ ಉದ್ರೇಕಿಸಿದನು. ಮುಸ್ಲಿಮ್ ಮಹಿಳೆಯರ ಬಗ್ಗೆ ಅತ್ಯಂತ ಕೊಳಕು ಅಶ್ಲೀಲವಾಗಿ ಪ್ರಸ್ತಾಪಿಸಿದನು. ಮಾತ್ರವಲ್ಲ ಅವನು ಪ್ರವಾದಿ ಕುಟುಂಬದ ಮಹಿಳೆಯರ ಬಗ್ಗೆ ಸಹ ಅಶ್ಲೀಲ ಪದ್ಯಗಳನ್ನು ರಚಿಸಿ ಹಾಡಿದನು. ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹತ್ಯೆ ಮಾಡಲು ಸಹ ಗೂಢ ತಂತ್ರ ರೂಪಿಸಿದನು. ಈ ಸ್ಥಿತಿಯಲ್ಲಿ ಕಅಬ್ ಬಿನ್ ಅಶ್ರಫ್ ವಿರುದ್ಧ ಪ್ರತಿಜ್ಞೆ ಉಲ್ಲಂಘನೆ, ವಿದ್ರೋಹ, ಯುದ್ಧಕ್ಕೆ ಉತ್ತೇಜನ, ಪಿತೂರಿ, ಅಶ್ಲೀಲ ನುಡಿ, ಹತ್ಯೆಗೆ ಗೂಢ ಕಾರಸ್ಥಾನ ಮೊದಲಾದ ದೋಷಾರೋಪಗಳು ಸಾಬೀತಾದುವು. ಅಂತಹ ಪರಿಸ್ಥಿತಿಯಲ್ಲಿ ಮದೀನದ ಅಧ್ಯಕ್ಷನೂ ಸರ್ವೋನ್ನತ ಅಧಿಕಾರಿಯೂ ಆಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ್ ಬಿನ್ ಅಶ್ರಫ್‌ನನ್ನು ವಧಾರ್ಹನೆಂದು ವಿಧಿಸಿದರು. ಅವನನ್ನು ರಹಸ್ಯವಾಗಿ ವಧಿಸಲು ಆಜ್ಞಾಪಿಸಿದರು. ಅವರು ಔಸ್ ಗೋತ್ರದ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸ್ಲಿಮರಿಗೆ ಈ ಕೆಲಸ ವಹಿಸಿಕೊಟ್ಟರು.

ಕಅಬನನ್ನು ಹತ್ಯೆ ಮಾಡಿದ ಸಮಾಚಾರ ತಿಳಿದಾಗ ಎಲ್ಲಾ ಯಹೂದಿಯರು ರೊಚ್ಚಿಗೆದ್ದರು. ಯಹೂದಿಯರ ಒಂದು ಪ್ರತಿನಿಧಿ ಸಂಘ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಿ 'ನಮ್ಮ ಮುಖಂಡ ಕಅಬ್ ಬಿನ್ ಅಶ್ರಫ್ ವಧಿಸಲ್ಪಟ್ಟರು' ಎಂದು ದೂರು ನೀಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ನನಗೆ ಅದರ ಬಗ್ಗೆ ತಿಳಿದಿಲ್ಲ' ಎಂದು ಹೇಳಲಿಲ್ಲ. ಅವರು ಹೇಳಿದರು: ಕಅಬ್ ಬಿನ್ ಅಶ್ರಫ್ ಯಾವುದೆಲ್ಲಾ ಅಪರಾಧ ಮಾಡಿರುವನೆಂದು ನಿಮಗೆ ತಿಳಿದಿದೆ. ಅವರು ಅನಂತರ ಕಅಬ್ ಮಾಡಿದ ಪ್ರತಿಜ್ಞೆಯ ಉಲ್ಲಂಘನೆ, ಯುದ್ಧಕ್ಕೆ ಉತ್ತೇಜನ, ಪಿತೂರಿ, ಅಶ್ಲೀಲ ಹೇಳಿಕೆಗಳು, ಹತ್ಯೆ ಮಾಡಲು ಗೂಢಾಲೋಚನೆ ಮೊದಲಾದುವುಗಳ ಬಗ್ಗೆ ನೆನಪಿಸಿಕೊಟ್ಟಾಗ ಯಹೂದಿಯರು ಭಯಗೊಂಡು ಮೌನವನ್ನು ಅವಲಂಬಿಸಿದರು. ಕಅಬ್ ವಿರುದ್ಧ ಆಪಾದನೆ ಸತ್ಯವಾಗಿರುವಾಗ ಅವನಿಗೆ ಆ ಶಿಕ್ಷೆ ಸಿಗಬೇಕಾಗಿತ್ತು ಎಂದು ಅವರಿಗೆ ಮನವರಿಕೆಯಾಯಿತು. ಹಝ್ರತ್ ಮಿರ್ಝಾ

ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್ಯಾಯದಿಂದ ಈ ಕೊಲೆ ನಡೆಸಿದರೆಂದು ಪಾಶ್ಚಿಮಾತ್ಯ ಚರಿತ್ರೆಗಾರರು ಆಕ್ಷೇಪಿಸುತ್ತಾರೆ. ಆದರೆ ಅವರು ಮಾಡುವ ಆಕ್ಷೇಪ ತಪ್ಪಾಗಿದೆ.

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್ ಪಶ್ಚಿಮಾತ್ಯ ಚರಿತ್ರೆಗಾರರಿಗೆ ಉತ್ತರವಾಗಿ ಬರೆಯುತ್ತಾರೆ: ಇಂದಿನ ನಾಗರಿಕ ಸುಸಂಸ್ಕೃತ ದೇಶಗಳಲ್ಲಿಯೂ ವಿದ್ರೋಹ, ಪ್ರತಿಜ್ಞೆ ಉಲ್ಲಂಘನೆ, ಯುದ್ಧ ಮಾಡಲು ಉತ್ತೇಜನೆ, ಹತ್ಯೆಗೆ ಗೂಢ ಕಾರಸ್ಥಾನ ಮೊದಲಾದ ಅಪರಾಧಗಳಿಗೆ ವಧೆಯ ಶಿಕ್ಷೆ ನೀಡಲಾಗುತ್ತಿದೆ. ಹೀಗಿರುವಾಗ ಕಅಬ್ ಹತ್ಯೆಯ ಬಗ್ಗೆ ಆಕ್ಷೇಪ ಹೇಗೆ ತಾನೆ ಸರಿಯಾಗುವುದು? ಇನ್ನೊಂದು ಆಕ್ಷೇಪ ರಾತ್ರಿಯಲ್ಲಿ ರಹಸ್ಯವಾಗಿ ಹತ್ಯೆಯನ್ನು ಏಕೆ ಮಾಡಲಾಯಿತು ಎಂದು. ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ನೆನಪಿಡಬೇಕಾದುದೇನೆಂದರೆ ಆ ಕಾಲದಲ್ಲಿ ಅರಬ್ ದೇಶದಲ್ಲಿ ಸುಸಂಘಟಿತ ಸರಕಾರವಿರಲಿಲ್ಲ. ಒಬ್ಬ ಮುಖ್ಯ ಆಡಳಿತೆಗಾರನನ್ನು ನೇಮಿಸಲಾಗಿತ್ತು. ಆದರೆ ಪ್ರತಿ ವ್ಯಕ್ತಿ ಮತ್ತು ಪ್ರತಿಯೊಂದು ಗೋತ್ರ ಸ್ವತಂತ್ರವೂ ಸ್ವಾವಲಂಬಿಯೂ ಆಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಕಅಬನನ್ನು ಹಾಜರುಪಡಿಸುವ ನ್ಯಾಯಾಲಯವಿರಲಿಲ್ಲ. ಅದರಲ್ಲಿ ಹಾಜರುಪಡಿಸಿ ಹತ್ಯೆಯ ಆಜ್ಞೆ ಪಡೆಯಲು ಸಾಧ್ಯವಿರಲಿಲ್ಲ. ಯಹೂದಿಯರು ಆಗ ವಿದ್ರೋಹಿಗಳಾಗಿದ್ದರು. ಸಲೀಮ್ ಮತ್ತು ಗತ್‌ಫಾನ್ ಗೋತ್ರಗಳು ಮದೀನವನ್ನು ಆಕ್ರಮಿಸಲು ಸಿದ್ಧತೆಗಳನ್ನು ಮಾಡುತ್ತಿದ್ದರು. ಆದುದರಿಂದ ಮುಸ್ಲಿಮರು ಆತ್ಮ ಸಂರಕ್ಷಣೆಗೋಸ್ಕರ ಕಅಬನನ್ನು ಆ ರೀತಿ ಹತ್ಯೆ ಮಾಡದೆ ಬೇರೆ ಮಾರ್ಗವಿರಲಿಲ್ಲ. ಏಕೆಂದರೆ ಅನೇಕ ನಿಷ್ಕಳಂಕರಾದ ಜನರ ಜೀವವನ್ನು ಹಾಗೂ ನಾಡಿನ ಸುಬದ್ರತೆಯನ್ನು ಅಪಾಯಕ್ಕೆ ಗುರಿಪಡಿಸುವುದಕ್ಕಿಂತ ಒಬ್ಬ ಉದ್ಧಟತನ ಪಿತೂರಿಗಾರನನ್ನು ವಧಿಸುವುದು ಉತ್ತಮವಾಗಿದೆ. ಆದುದರಿಂದ ಸಾವಿರದ ಮುನ್ನೂರು ವರ್ಷಗಳ ನಂತರ ಮಾಡಲಾಗುವ ಈ ಆಕ್ಷೇಪ ನಿರರ್ಥಕವಾಗಿದೆ. ಆ ಕಾಲದಲ್ಲಿ ಯಹೂದಿಯರು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿಶದೀಕರಣ ಆಲಿಸಿದ್ದರು ಮತ್ತು ಯಾವುದೇ ಆಕ್ಷೇಪ ಸೂಚಿಸಿರಲಿಲ್ಲ.

ಅಲ್ಲಾಹನು ಯಾವಾಗಲೂ ಇಸ್ಲಾಮನ್ನು ಸಂರಕ್ಷಿಸುವವನಾಗಲಿ ಮತ್ತು ಪಿತೂರಿಗಳಿಂದ ರಕ್ಷಿಸುವವನಾಗಲಿ. ಈ ಕಾಲಘಟ್ಟದಲ್ಲಿ ಅಲ್ಲಾಹನು ಕಳುಹಿಸಿದ ಮಾರ್ಗದರ್ಶಕ ಇಸ್ಲಾಮಿನ ಪುನಶ್ಚೇತನಕ್ಕೋಸ್ಕರ ಆಗಮಿಸಿದವರಾಗಿದ್ದಾರೆ. ಅವರನ್ನು ನಂಬುವ ಭಾಗ್ಯ ಜನರಿಗೆ ಲಭಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At,Masjid Baithul Futhuh London, UK. On 07-12-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon